ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ಅರ್ಹತೆ ಇದ್ದವರಿಗೆ ಆದಷ್ಟು ಬೇಗನೆ ಕೊಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಮಂಡ್ಯದಲ್ಲಿ ಸೈಟು ಇದ್ದವರಿಗೆ ಬೆಂಗಳೂರಿನಲ್ಲಿ ಕೊಡುತ್ತೀರಿ, ಚಿತ್ರದುರ್ಗ ಸೈಟು ಇರುವವರಿಗೆ ಬೆಂಗಳೂರಿನಲ್ಲಿ ಕೊಡುತ್ತೀರಿ. ಹೀಗೆ ಅನೇಕ ಸೈಟುಗಳನ್ನು ಕೊಟ್ಟಿದ್ದೀರಿ. ೪-೬ ಕಡೆ ಸೈಟುಗಳು ಇರುವವರಿಗೆ ಬೆಂಗಳೂರಿನಲ್ಲಿ ಸೈಟುಗಳನ್ನು ಕೊಡುತ್ತೀರಾ ಹೇಗೆ ?

ಶ್ರೀ ಆರ್. ವಿ. ದೇಶಪಾಂಡೆ.—ಶಾಸಕರಿಗೆ ಕೊಟ್ಟಿಲ್ಲವೇ ? ಕಾಯಿದೆಯಲ್ಲಿ ಎಲಿಜಿಬಿಲಿಟಿ ಇದ್ದರೆ ಕೊಡುತ್ತೇವೆ.

ಬೆಳ್ತಂಗಡಿ ತಾಲ್ಲೂಕಿನ ಜಮಾಲಾಬಾದ್ ಘಟ್ಟವನ್ನು ಪ್ರವಾಸಿಗರ ಕೇಂದ್ರವನ್ನಾಗಿ ಮಾಡುವುದು

೪೦೬೬. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಪೂರ್ತಿ ವಾರ್ತಾ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪ್ರಕೃತಿಯ ತವರೂರು ಎನಿಸಿದ ಬೆಳ್ತಂಗಡಿ ತಾಲ್ಲೂಕಿನ ಜಮಾಲಾಬಾದ್ ಘಡವನ್ನು ಪ್ರವಾಸಿಗರ ಕೇಂದ್ರವನ್ನಾಗಿ ಮಾಡಲು ಹಲವು ಬಾರಿ ನಿವೇದಿಸಿಕೊಂಡಿದ್ದರೂ ಈ ಕುರಿತು ಸರ್ಕಾರ ಕಾರ್ಯಪ್ರವೃತ್ತರಾಗದಿರಲು ಕಾರಣವೇನು ?

ಆ) ಸರ್ಕಾರದವರು ಪ್ರಸಕ್ತ ವರ್ಷದಲ್ಲಾದರೂ ಕಾರ್ಯ ಕೈಗೊಳ್ಳುವರೆ ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಈ ತರಹದ ಯಾವುದೇ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ,

ಶ್ರೀ ಕೆ. ವಸಂತ ಬಂಗೇರ —ನನ್ನ ಪ್ರಶ್ನೆಗೆ ಯಾವುದೇ ಪ್ರಸ್ತಾವನೆ ಸರ್ಕಾರಕ್ಕೆ ಬಂದಿರುವುದಿಲ್ಲ ಮತ್ತು ಉದ್ಭವಿಸುವುದಿಲ್ಲ ಎಂದು ಉತ್ತರಿಸಿದ್ದಾರೆ: ಇದು ಸಾಮಾನ್ಯವಾಗಿ ಬರತಕ್ಕ ಉತ್ತರ. ಸರ್ಕಾರಕ್ಕೆ ನಾನು ೧೯೮೩ರಿಂದ ಈ ಬಗ್ಗೆ ಪ್ರಸ್ತಾವನೆಗಳನ್ನು ಸಲ್ಲಿಸುತ್ತಾ ಬಂದಿದ್ದೇನೆ. ಮತ್ತು ಪ್ರತಿ ಅಧಿವೇಶನದಲ್ಲೂ ಪ್ರಶ್ನೆ ಕೇಳುತ್ತಾ ಬಂದಿದ್ದೇನೆ, ಸಂಬಂಧಪಟ್ಟ ಮಂತ್ರಿಗಳು ಮುಂದಿನ ವರ್ಷ ಆ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದೆಂದು ಉತ್ತರಿಸಿದ್ದಾರೆ. ರಾಜ್ಯದಲ್ಲಿ ಅತಿ ಎತ್ತರ ಅಂದರೆ ೨ ಸಾವಿರ ಅಡಿ ಎತ್ತರದ ಏಕ ಬಂಡೆ ವಿಸ್ತಾರವಾದ ಬಂಡೆ ಅದು, ಅದರ ಮೇಲ್ಗಡೆ ನೀರು ಕೂಡ ಇದೆ ಬಂಡೆ ವೀಕ್ಷಣೆಗಾಗಿ ದೇಶ ವಿದೇಶಗಳಿಂದ ಸಾವಿರಾರು ಮಂದಿ ಪ್ರವಾಸಿಗರು ಬರುತ್ತಿದ್ದಾರೆ, ಆದ್ದರಿಂದ, ಬಂಡೆ ಗಲ್ಲನ್ನು ಏರಲು ಮುಂದಿನ ವರ್ಷವಾದರೂ ಲಿಫ್ಟ್ ವ್ಯವಸ್ಥೆ ಮಾಡುವ ಕಾರ್ಯಕ್ರಮವನ್ನು ಕೈಗೊಳ್ಳುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ನಮ್ಮ ಸರ್ಕಾರದ ಮಾಹಿತಿ ಪ್ರಕಾರ ಇಂಥ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿಲ್ಲ. ವಸಂತ ಬಂಗೇರರವರು ಏನೂ ಪ್ರಸ್ತಾಪಿಸಿದ್ದಾರೆ ಆ ಬಗ್ಗೆ ಹೇಳುವುದಾದರೆ ಟಿಪ್ಪು ಸುಲ್ತಾನ್ ಕಾಲದಲ್ಲಿ ಕಟ್ಟಿಸಿದ ಕೋಟೆ ಅಲ್ಲಿದೆ. ಆ ಊರಿನ ಜನಸಂಖ್ಯೆ ಎರಡು ಸಾವಿರ ಇದೆ. ಅದೂ ಪಂಡಲ ಪಂಚಾಯ್ತಿಯ ಕೇಂದ್ರ ಸ್ಥಳವಾಗಿದೆ. ಆದರೆ ಪ್ರವಾಸಿಗರನ್ನು ಆಕರ್ಷಿಸುವ ರೀತಿಯಲ್ಲಿ ಅದು ಇಲ್ಲ. ಎರಡು ಸಾವಿರ ಅಡಿ ಎತ್ತರವಾಗಿರುವ ಪ್ರದೇಶವಾಗಿರುವುದರಿಂದ ಸ್ವಲ್ಪಮಟ್ಟಿಗೆ ಪ್ರವಾಸಿಗರಿಗೆ ತಂಗುವ ವ್ಯವಸ್ಥೆ ಮಾಡಬಹುದು ಆದರೆ ಲಿಫ್ಟ್‌ನ್ನು ಹಾಕಿಸುವುದಕ್ಕಾಗುವುದಿಲ್ಲ. ಅಲ್ಲಿಗೆ ಎಷ್ಟರಮಟ್ಟಿಗೆ ಜನ ಬರುತ್ತಾರೆಂಬುದನ್ನು ನೋಡಬೇಕಾಗುತ್ತದೆ. ಈಗ ನಂದಿಬೆಟ್ಟಕ್ಕೆ ಚಾಮುಂಡಿ ಬೆಟ್ಟಕ್ಕೆ ಅಂಥ ಅವಕಾಶ ಇಲ್ಲ, ಪ್ರವಾಸಿ ಕೇಂದ್ರಕ್ಕೆ ಬೇಕಾದ ಸೌಲಭ್ಯವನ್ನು ಒದಗಿಸುವ ಬಗ್ಗೆ ಪರಿಶೀಲಿಸುತ್ತೇವೆ. ತಾವು ಕೂಡ ಆ ಬಗ್ಗೆ ಸಲಹೆ ಕೊಡಬಹುದು.

ಶ್ರೀ ಕೆ. ವಸಂತ ಬಂಗೇರ. —ಎಲ್ಲಿಗೆ ಎಷ್ಟು ಜನ ಪ್ರವಾಸಿಗರು ಬರುತ್ತಾರೆಂಬ ಬಗ್ಗೆ ತಾಪ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ತರಿಸಬಹುದು. ಅವಕ್ಕೆ ಬೇಕಾದ ಮನವಿಯನ್ನು ಸಚಿವರಿಗೆ ಕೊಡುತ್ತೇನೆ. ಮುಂದಿನ ವರ್ಷದಲ್ಲಾದರೂ ನನ್ನ ಮನವಿಯಂತೆ ಕ್ರಮ ಕೈಗೊಳ್ಳಿ ರೀರಾ ?

ಶ್ರೀ ಎಂ. ಪಿ. ಪ್ರಕಾಶ್. —ಮನವಿ ಬರಲಿ. ಈ ಪ್ರಶ್ನೆಯ ಆಧಾರದ ಮೇಲೆ ಈಗಾಗಲೇ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಅರ್ಹತೆ ಮತ್ತು ಆದ್ಯತೆ ಮೇಲೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

ಅಧ್ಯಕ್ಷರು. —ಶಿವಣ್ಣನವರೇ ತಮ್ಮ ಪ್ರಶ್ನೆಗೆ ಮಂತ್ರಿಗಳು ವೇಳೆ ಕೇಳಿದ್ದಾರೆ. ನಿಮ್ಮ ಪರವಾಗಿ ನಾನು ಅವರನ್ನು ಯಾವಾಗ ಉತ್ತರ ಕೊಡುತ್ತೀರೆಂದು ಕೇಳುತ್ತಿದ್ದೇನೆ.

ಶ್ರೀ ಎಂ. ಶಿವಣ್ಣ. —ನಮ್ಮ ಕ್ಷೇತ್ರದ ಬಗ್ಗೆ ಪ್ರಶ್ನೆ ಕೇಳಿದರೆ ಯಾವಾಗಲೂ ಉತ್ತರ ಸಿಗುವುದಿಲ್ಲ ನನ್ನದು ರಿಸರ್ವ್ ಕಾನ್‌ಸ್ಟಿಟುಯೆನ್ಸಿ ಎಂದು ತಾರತಮ್ಯ ಮಾಡುತ್ತಿದ್ದೀರಾ ? ಏತಕ್ಕೆ ಉತ್ತರ ಬರುವುದಿಲ್ಲ ? ನಾವು ಆನ್‌ಟಚಬಲ್ ಆಗಿದ್ದೇವೆ, ಪ್ರಶ್ನೆ ಕಳುಹಿಸಿ ೨೦ ದಿವಸ ಆಯಿತು ಇನ್ನೂ ಉತ್ತರ ಬಂದಿಲ್ಲ.

ಶ್ರೀ ಎಂ. ಪಿ. ಪ್ರಕಾಶ್. —ಮಾನ್ಯ ಅಧ್ಯಕ್ಷರೆ ಅವರು ಈ ರೀತಿ ಆಪಾದನೆ ಮಾಡಬೇಕಾದ ಅಗತ್ಯ ಇಲ್ಲ. ವಿವರಗಳು ಬಂದಿಲ್ಲದಿರುವುದರಿಂದ ಉತ್ತರ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಮಾನ್ಯ ಸದಸ್ಯರಾದ ಶಿವಣ್ಣನವರೇ ಅಲ್ಲಿನ ತಾಲ್ಲೂಕು ಸಮಿತಿಯ ಅಧ್ಯಕ್ಷರಾಗಿದ್ದಾರೆ. ಅವರಿಗೆ ಬೇಕಾಗಿರತಕ್ಕ ವಿವರಗಳು ಅವರ ಅಧೀನದಲ್ಲಿರತಕ್ಕ ತಾಲ್ಲೂಕು ಸಮಿತಿಯಲ್ಲೇ ಸಿಗುತ್ತವೆ. ಎಚ್. ಡಿ. ಕೋಟೆ ತಾಲ್ಲೂಕಿನಲ್ಲಿ ಜಿಲ್ಲಾ ಪರಿಷತ್ ತಾಂತ್ರಿಕ ವಿಭಾಗಕ್ಕೆ ಸೇರಿದ ರಸ್ತೆಗಳಿಷ್ಟು, ಈ ರಸ್ತೆಗಳಿಗೆ ೧೯೮೭-೮೮ನೇ ಸಾಲಿಗೆ ಒದಗಿಸಲಾಗಿರುವ ಹಣವೆಷ್ಟು, ಪ್ರತಿ ರಸ್ತೆಗೆ ಒದಗಿಸಿರುವ ಹಣದ ವಿವರ ಏನು ಎಂದು ಕೇಳಿದ್ದಾರೆ. ತಾಲ್ಲೂಕು ಪಂಚಾಯಿತಿ ಸಮಿತಿಗೆ ಶಿವಣ್ಣನವರೇ ಅಧ್ಯಕ್ಷರಾಗಿದ್ದಾರೆ. ಅಲ್ಲೇ ಸಿಗತಕ್ಕ ವಿವರಗಳನ್ನು ಅಲ್ಲಿ ಕೇಳಲಾರದೆ ಇಲ್ಲಿ ಪ್ರಸ್ತಾಪ ಮಾಡುವುದು ಎಷ್ಟುಮಟ್ಟಿಗೆ ಸಾಧುವಾದುದು ಎಂಬುದನ್ನು ಅವರು ಯೋಚನೆ ಮಾಡಬೇಕು.

ಅಧ್ಯಕ್ಷರು. —ನಿಮಗೆ ಎಲ್ಲಿ ಪ್ರಶ್ನೆ ಹಾಕಬೇಕು ಎಂದು ಗೊತ್ತಿಲ್ಲ.

ಶ್ರೀ ಎಂ. ಶಿವಣ್ಣ. —ಉತ್ತರ ಏತಕ್ಕೆ ಹೇಳುವುದಿಲ್ಲ ?

ಅಧ್ಯಕ್ಷರು, —ಹೀಗೆಲ್ಲಾ ಹೇಳಿದರೆ ನೀವು ಅಲ್ಲಿ ಅಧ್ಯಕ್ಷರಾಗಿ ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಹೇಳಬೇಕಾಗುತ್ತದೆ. ನಿಮಗೆ ಮಾಹಿತಿ ಎಲ್ಲಿ ಸಿಗುತ್ತದೆ ಎಂಬುದು ಗೊತ್ತಿಲ್ಲ. ಆದರೂ ತರಿಸಿಕೊಡುತ್ತೇನೆ ಕೂತ್ಕೊಳ್ಳಿ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ತೀರ್ಥಹಳ್ಳಿ ತಾಲ್ಲೂಕು ಕರಡಿಗ ಗ್ರಾಮದ ಭೂ ಸಂರಕ್ಷಣಾ ಇಲಾಖೆಯ ಮಾಹಿತಾಂತರ ಕೈಗೊಂಡಿರುವ ಅಭಿವೃದ್ಧಿ ಯೋಜನೆ

೨೯೩೭ ಶ್ರೀ ಆರ್. ಎನ್. ನಾಯಕ್ (ಭಟ್ಕಳ್)—ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕು ಕರಡಿಗ ಗ್ರಾಮದಲ್ಲಿ(ಎನ್ ಆರ್ ಇ ಪಿ) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಡಿಯಲ್ಲಿ (ಭೂ ಸಾರ ಸಂರಕ್ಷಣಾ ಇಲಾಖೆ ಮಾಹಿತಾಂತರ ಕೃಷಿ ಜಮೀನು ಮಟ್ಟ) ಅಭಿವೃದ್ಧಿ ಯೋಜನೆ ಕೆಲಸಗಳನ್ನು ೧೯೮೩-೮೪, ೧೯೮೪-೮೫ ರಲ್ಲಿ ಕೈಗೆತ್ತಿಕೊಂಡಿರುವುದು ನಿಜವೇ ?

ಆ) ಸದರಿ ಯೋಜನೆಗೆ ಮಂಜೂರಾದ ಸಂಪೂರ್ಣ ಹಣವನ್ನು ಸರ್ಕಾರ ಬಿಡುಗಡೆ ಮಾಡಿದೆಯೇ ?